ಇಂದು ದಿನಾಂಕ: 27-10-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಿಂದ :-

ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನೋಡುತ್ತಿದ್ದೇನೆ, ಮತ್ತು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

Copies of Bank account statement as Ex.D. 1 and 2.

ಪಾಟಿ ಸವಾಲುಃ ವಾದಿ ಪರ ಶ್ರೀ ಎ.ಎನ್.ಆರ್. ವಕೀಲರಿಂದ:

ನಾನು ಖಾಯಂ ಕಾತರಕಿ ಗ್ರಾಮದ ನಿವಾಸಿ ಎಂದರೆ ಸರಿ. ದಾವಾ ಜಮೀನುಗಳು 2001 ರಲ್ಲಿ ನನ್ನ ಮತ್ತು ನನ್ನ ಸಹೋದರ ಹಾಗೂ ಸಹೋದರನ ಹೆಂಡತಿಯ ಮಧ್ಯೆ ಆದ ಪಾಲು ವಿಭಾಗದ ಪ್ರಕಾರ ನನ್ನ ಪಾಲಿಗೆ ಬಂದಿರುತ್ತವೆ ಎಂದರೆ ಸರಿ. ದಿ:05-12-2001 ರಂದು ದಾವಾ ಆಸ್ತಿಗಳನ್ನು ನಾನು ಮುಟೇಷನ್ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ನಾನು ದಾವಾ ಜಮೀನುಗಳ ಸಂಪೂರ್ಣ ಮಾಲೀಕನಾಗಿದ್ದೆ ಎಂದರೆ ಸರಿ. ದಾವಾ ಜಮೀನುಗಳಿಗೆ ಸಂಬಂಧಿಸಿದಂತೆ ನನಗೆ ವ್ಯವಹಾರ ಮಾಡಲು ಸಂಪೂರ್ಣ ಹಕ್ಕು ಇದೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ನನ್ನ ಮಕ್ಕಳಿಗೆ ನಾನು ಭಾಗ ಕೊಟ್ಟಿಲ್ಲ ಎನ್ನುತ್ತಾರೆ.

ದಿ: 20-03-2019 ರಂದು ದಾವಾ ಜಮೀನುಗಳನ್ನು ವಾದಿಗೆ ಮಾರಾಟ ಮಾಡುವ ಉದ್ದೇಶದಿಂದ ಅವನಿಂದ 33 ಲಕ್ಷಗಳ ಪೈಕಿ ಭಾಗಶ: ಕ್ರಯದ ಹಣ32 ಲಕ್ಷ ಪಡೆದುಕೊಂಡು ವಾದಿಗೆ ಕ್ರಯದ ಕರಾರು ಪತ್ರ ಬರೆಸಿ ನೊಂದಣಿ ಮಾಡಿಸಿಕೊಟಿದ್ದೇನೆ ಎಂದರೆ ಸರಿಯಲ್ಲ . ನನಗೆ ವಾದಿ ಯಾರೆಂಬುದು ಗೊತ್ತಿಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ವಾದಿ ಪರ ವಕೀಲರು ನಿಪಿ-1 ನ್ನು ಮೊಖಬಿಲೆ ಮಾಡಿ ನಿಪಿ-1 ರ 2 ನೇ ಪುಟದ ಮೇಲೆ ಇರುವ ಬಾವ ಚಿತ್ರ ಮತ್ತು ಸಹಿ ಇರುವುದನ್ನು ಸಾಕ್ಷಿದಾರರಿಗೆ ತೋರಿಸಿ 2 ನೇ ಕ್ರಮಾಂಕದಲ್ಲಿರುವ ಬಾವಚಿತ್ರ ಮತ್ತು ಸಹಿಗಳು ನಿಮ್ಮದಿವೆ ಎಂದು ಸೂಚಿಸಿದಾಗ ಸಾಕ್ಷಿದಾರರು ಹೌದು ಎಂದು ಒಪ್ಪಿರುವುದರಿಂದ ಸದರಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಿಪಿ-1 ರ ಮೇಲೆ ನನ್ನ ಮಗ ಶಾಂತನಗೌಡರವರು ಸಮ್ಮತಿ ಸಾಕ್ಷಿದಾರರೆಂದು ಸಹಿ ಮಾಡಿದ್ದಾರೆ ಎಂದರೆ ಸರಿ. ಬಜ್ಜಣ್ಣ ಗುಡದಿನ್ನಿ ಮತ್ತು ಗುರುನಾಥರವರು ನನ್ನ ಮಗ ಶಾಂತನಗೌಡರವರ ಜೊತೆ ಮಾಡಿರುವ ವ್ಯವಹಾರಕ್ಕೂ ಮತ್ತು ನಿಪಿ-1 ಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ನನಗೆ ಗೊತ್ತಿಲ್ಲ. ಬಜ್ಜಣ್ಣ ಮತ್ತು ಗುರುನಾಥರವರಿಗೆ ಸೆಕ್ಯೂರಿಟಿ ಸಲುವಾಗಿ ನನ್ನ ಮಗನ ಪರವಾಗಿ ನಾನು ನಿಪಿ-1 ನ್ನು ಬರೆದುಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-1 ಮತ್ತು 2 ದಾವಾ ಆಸ್ತಿಯ ವ್ಯವಹಾರಕ್ಕೆ ಸಂಬಂಧಪಟ್ಟಿಲ್ಲ ಎಂದರೆ ಸಾಕ್ಷಿದಾರರು ನನ್ನ ಮಗ ಭತ್ತದ ಹಣ 32 ಲಕ್ಷದ ಪೈಕಿ 22 ಲಕ್ಷ ಕೊಟ್ಟ ಬಗ್ಗೆ ಅವನು ಆ ದಾಖಲೆಗಳನ್ನು ಸಲ್ಲಿಸು ಎಂದು ಹೇಳಿದ್ದಾನೆ ಎನ್ನುತ್ತಾರೆ. ನಿಡಿ-1 ಮತ್ತು 2 ರಲ್ಲಿ ವಾದಿಗೆ ಕ್ರಯದ ಮುಂಗಡದ ಹಣ ವಾಪಸ್ಸು ಕೊಟ್ಟ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸರಿಯಲ್ಲ . ವಾದಿಯು ಕ್ರಯದ ಬಾಕಿ ಹಣ ರೂ1,00,000/- ಹಣ ತೆಗೆದುಕೊಂಡು ದಾವಾ ಆಸ್ತಿಯ ಕ್ರಯ ಪತ್ರ ಕರಾರು ಪತ್ರ ಬರೆದುಕೊಡಬೇಕೆಂದು ಕೇಳಿದ್ದರು ಸಹ ನಾನು ನನ್ನ ಭಾಗದ ಕರಾರನ್ನು ಜಾರಿಗೊಳಿಸಲು ಮುಂದೆ ಬಂದಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವೆ ಸಲ್ಲಿಸುವುದಕ್ಕಿಂತ ಮೊದಲು ನನಗೆ ಕಳುಹಿಸಿರುವ ನೋಟಿಸನ್ನು ಉದ್ದೇಶಪೂರ್ವಕವಾಗಿ ನಾನು ಸ್ವೀಕಾರ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯು ತನ್ನ ಭಾಗದ ಕರಾರನ್ನು ನಿರ್ವಹಿಸಲು ಇವತ್ತಿಗೂ ತಯಾರಿದ್ದರು ನಾನು ನಿರಾಕರಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯಿಂದ ಒಂದು ಲಕ್ಷ ಬಾಕಿ ಹಣ ಪಡೆದು ವಾದಿಗೆ ದಾವಾ ಆಸ್ತಿಯ ಕ್ರಯ ಪತ್ರ ಬರೆದುಕೊಡಲು ನಾನು ಬಾಧ್ಯನಾಗಿದ್ದೇನೆ ಎಂದರೆ ಸರಿಯಲ್ಲ.

ದಾವೆ ಚಾಲ್ತಿಯಲ್ಲಿದ್ದಾಗ ನನ್ನ ಇನ್ನೊಬ್ಬ ಮಗ ಶಂಕರಗೌಡನ ಹೆಸರಿನಲ್ಲಿ ದಾವಾ ಆಸ್ತಿ ಸರ್ವೆ ನಂ.22 ನ್ನು ವರ್ಗಾವಣೆ ಮಾಡಿಸಿದ್ದೇನೆ ಎಂದರೆ ನೆನಪಿಲ್ಲ. ಸರ್ವೆ ನಂ.24 ರಲ್ಲಿರುವ ದಾವಾ ಆಸ್ತಿ 2 ಎಕರೆ 36 ಗುಂಟೆ ದಾವೆ ಚಾಲ್ತಿಯಲ್ಲಿದ್ದಾಗ ಶಂಕರಗೌಡನ ಹೆಂಡತಿ ಸುಲೋಚನರವರ ಹೆಸರಿನಲ್ಲಿ ವರ್ಗಾವಣೆ ಮಾಡಿಸಿದ್ದೇನೆ ಎಂದರೆ ನೆನಪಿಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.